ಚಿತ್ರದುರ್ಗ ಸುತ್ತಿನ ಮ್ಯಾಸಬೇಡರು, ಕಾಡುಗೊಲ್ಲರ ಹಟ್ಟಿಗಳ ರಚನೆಯೇ ಹಾಗಿದ್ದಿತು. ಆ ಬೇಲಿಯ ಒಳಗೆ ಮತ್ತೆ ಇನ್ನೊಂದು ಸುತ್ತಿನ ಮುಳ್ಳು ಬೇಲಿ ಇದ್ದು ಅಲ್ಲಿ ಅವರ ದೇವರುಗಳು ಎತ್ತಪ್ಪ, ಪಾತಪ್ಪ, ಕ್ಯಾತಪ್ಪ, ಜುಂಜಪ್ಪ, ಸಿರಿಯಣ್ಣ, ಎರ‍್ರಪ್ಪ ಇದ್ದವು. ಇಡೀ ಹಟ್ಟಿ ಸ್ವಚ್ಚವಾಗಿರುತ್ತಿತ್ತು. ಹಟ್ಟಿಯ ಮಧ್ಯೆ ನೀರಿನ ಬಾವಿ.

ಕೃಷ್ಣಶಾಸ್ತ್ರಿಯವರು ಹಟ್ಟಿಯ ಒಳಗೆ ನುಗಿದ್ದೇ ಎಲ್ಲರೂ ಅವರನ್ನು ಚಿಕಪ್ಪ ಬಾ, ದೊಡ್ಡಪ್ಪ ಬಾ ಎನ್ನತೊಡಗಿದರು. ಚಿತ್ರದುರ್ಗ ಸೀಮೆಯಲ್ಲೆಲ್ಲ ಅದರಲ್ಲೂ ಮುಖ್ಯ ತಿಪ್ಪೇಸ್ವಾಮಿಯ ನಾಯಕನಹಟ್ಟಿಯ ಸುತ್ತಮುತ್ತ ಕಿರಿಯರು ಹಿರಿಯರನ್ನು ಯಾವುದೇ ಜಾತಿಮತ ಕುಲಗೋತ್ರವಾಗಲಿ ಚಿಕ್ಕಪ್ಪ, ದೊಡ್ಡಪ್ಪ ಎಂದೇ ಸಂಬೋಧಿಸುತ್ತಿದ್ದರು. ಮುಸ್ಲಿಮರಾದರೂ ಅಂತೆಯೇ ಕರೆಯುತ್ತಿದ್ದರು. ಕೃಷ್ಣಶಾಸ್ತ್ರಿಗಳನ್ನು ಬಂಧುವಾಚಕದಿಂದ ಕರೆದವರು ನನ್ನನ್ನು ಅನುಮಾನದಿಂದ ನೋಡತೊಡಗಿದರು. ಸಿರಿಯಜ್ಜಿಯಂತೂ ಇವರು ಯಾರು ದೊಡ್ಡಪ್ಪ ಪ್ಯಾಂಟು ಹಾಕವರೇ ಹಟ್ಟಿಗೆ ಮೈಲಿಗೆಯಲ್ಲವಾ ಎಂದಳು. ಸಿರಿಯಜ್ಜಿಯದು ಮುಗ್ಧಭಾವ. ಮನಸ್ಸಿನಲ್ಲಿ ಇದ್ದುದನ್ನು ಅಂತೆಯೇ ಮಾತಾಡುತ್ತಿದ್ದಳು. ಯಾವುದೋ ಪಟ್ಟಣದಿಂದ ಹೊರಟು ಬಂದ ನಾನು ಅವರ ಆಚಾರ ವಿಚಾರ, ಸಂಪ್ರದಾಯ, ಆಚರಣೆಗಳಿಗೆಲ್ಲ ಧಕ್ಕೆ ತರುತ್ತೇನೆಂಬ ಭಯದಿಂದ ಹಾಗೆ ಮಾತನಾಡಿರಬಹುದೆನಿಸಿತು.

ಸಿರಿಯಜ್ಜಿಯನ್ನು ಭೇಟಿ ಮಾಡಿದಾಗ ಆಕೆಗೆ ವಯಸ್ಸು ಅರವತ್ತರ ಆಸುಪಾಸು. ಇಬ್ಬರು ಗಂಡುಮಕ್ಕಳು. ಇಬ್ಬರಿಗೂ ಮದುವೆಯಾಗಿತ್ತು. ಗಂಡ ತೀರಿಕೊಂಡಿದ್ದ. ನಾನೂ ಕೃಷ್ಣಶಾಸ್ತ್ರಿಗಳು ಸಿರಿಯಜ್ಜಿ ಹಟ್ಟಿಗೆ ಹೋದಾಗ ಅವರೆಲ್ಲರೂ ಯುಗಾದಿಯ ಸಂಭ್ರಮದಲ್ಲಿದ್ದರು. ಗುಡಿಯ ಬಳಿ ಇದ್ದ ಕಟ್ಟೆಯ ಮೇಲೆ ಕೂತು ಭಜನೆಯ ಪದಗಳನ್ನು ಹಾಡುತ್ತಿದ್ದರು. ಆ ಪದಗಳಲ್ಲಿ ಪುರಂದರ, ಕನಕದಾಸರ ಕೀರ್ತನೆಗಳೂ, ತತ್ವಪದಗಳು, ಶೃಂಗಾರ ಪದಗಳೂ ಇದ್ದವು. ಬಸ್ಸಿನ ಸಂಚಾರವಿಲ್ಲದ, ಅಕ್ಷರವಂತರ, ವಿದ್ಯಾವಂತರ ಸುಳಿವೇ ಇಲ್ಲದ ಈ ಪ್ರದೇಶಕ್ಕೆ ಕೀರ್ತನೆಗಳು, ತತ್ವಪದಗಳು ಹೇಗೆ ಪ್ರವೇಶಿಸಿದವೋ ಪರಮಾಶ್ಚರ್ಯ. ತಾವು ಕಟ್ಟಿದ ಕೀರ್ತನೆಗಳನ್ನು ಕರ್ನಾಟಕದಾದ್ಯಂತ ಕೀರ್ತನಕಾರರೇ ತಾಳತಂಬೂರಿ ಹಿಡಿದು ಪ್ರಚಾರ ಕಾರ್ಯ ಕೈಗೊಂಡಿದ್ದರ ಫಲವಿರಬೇಕು. ಅವರು ಎಲ್ಲೋ ಒಂದು ಕಡೆ ಪ್ರಚಾರ ಮಾಡಿದ್ದರೆ ಅದು ಇನ್ನೊಂದು ಗ್ರಾಮಕ್ಕೆ, ಹಟ್ಟಿಗೆ ಹಬ್ಬಿರಬೇಕು. ರಾಮಾಯಣ, ಮಹಾಭಾರತ, ಶಿವಪುರಾಣಗಳ ಬಯಲಾಟವಿದ್ದಂತೆ. ಒಂದು ಹಟ್ಟಿಯಲ್ಲಿ ಒಂದು ಬಯಲಾಟ ಆಡಿದರೆ ಅದೇ ಆಟವನ್ನು ಇನ್ನೊಂದು ಊರಿನಲ್ಲಿ ಆಡಿದಂತೆ. ಇಲ್ಲದಿದ್ದರೆ ಈ ಭಜನೆಯ ಪದಗಳು ಈ ಹಳ್ಳಿಯನ್ನು ಹೇಗೆ ಪ್ರವೇಶಿಸಲು ಸಾಧ್ಯ? ಜನಪದ ಕಥನಗೀತೆಗಳು, ಕಥೆಗಳು, ಒಬ್ಬರ ಬಾಯಿಂದ ಇನ್ನೊಬ್ಬರ ಧ್ವನಿಗೆ ಸೇರಿದಂತೆ ಈ ಕೀರ್ತನೆಗಳೂ ಕೂಡ ಜನಪದ ಮೌಖಿಕ ಪರಂಪರೆಯಲ್ಲಿ ಹಬ್ಬಿ ಹರಡಿರಬೇಕು. ಗ್ರಾಮಗಳ ಮತ್ತು ಹಳ್ಳಿಗಳ ಶಿಕ್ಷಣ ಪಠ್ಯಗಳು ಜನಪದವೇ, ಕೀರ್ತನೆಯೇ, ರಾಮಾಯಣ, ಮಹಾಭಾರತ ಇತ್ಯಾದಿ ಪುರಾಣಗಳೇ ಆಗಿದ್ದವು ಎಂದು ನನಗೆ ಆಮೇಲಾಮೇಲೆ ಅನಿಸಿತು. ಈ ಬಗೆಯ ಹಟ್ಟಿಗಳನ್ನು ನೋಡಿದಾಗಲೆಲ್ಲ ಅಲ್ಲಿಯ ನಿರುಮ್ಮಳ ಜೀವನ ಕುತೂಹಲಕರವಾಗಿ ಕಂಡಿತು. ಸಿರಿಯಜ್ಜಿಯಂತೆಯೇ ಅನೇಕಾನೇಕರು ಆ ಹಟ್ಟಿಗಳಲ್ಲಿ ಜಾತಿಮತ ಕುಲಗೋತ್ರ ಚಿಂತೆಯಿಲ್ಲದೆ, ಶ್ರೀಮಂತಿಕೆಯ ಅರಿವೇ ಇಲ್ಲದೆ ಜೀವನ ನಡೆಸುತ್ತಿದ್ದರು. ಆದರೆ ಆ ಸರಳ ಜೀವನದ ನಡುವೆಯೇ ಅವರಿಗೇ ತೊಂದರೆ ಕೊಡುವ ಹಲವು ಹತ್ತು ಮೂಢನಂಬಿಕೆಗಳಿದ್ದವು.

ಹೆಣ್ಣುಮಕ್ಕಳು ಪ್ರತಿ ತಿಂಗಳೂ ತಮ್ಮ ಋತುಚಕ್ರದ ಸಂದರ್ಭದಲ್ಲಿ ಹಟ್ಟಿಯ ಹೊರಗಿನ